
ಕಪ್ಪೆ ನುಂಗುತ್ತಿರುವ ಮರಿ ಹಸಿರು ಹಾವು (Green Vine snake)

ಮೊದಲಾದ್ದರಿಂದ ಸ್ವಾಭಾವಿಕವಾಗಿ ದಿಗಿಲು ಮನೆ ಮಾಡಿತ್ತು. ಬೂಟುಗಳ ಮೇಲಷ್ಟೇ ಹತ್ತಿದರೂ ಕಿರುಚಾಡಿ ಅದರ ಮೇಲೆ ಉಪ್ಪು ಸುರಿದು ಆತುರದ ಹೆಜ್ಜೆಗಳಿಡುತ್ತಿದ್ದಾಗ, ಆ ಸಣ್ಣ ಜೀವಿ ಅಪಾಯಕಾರಿಯಲ್ಲವೆಂದು ತಿಳಿದಿದ್ದ ನಮಗೆ ನಗುವೋ ನಗು. ನಿರಂತರ ಸುರಿಯುತಿದ್ದ ಮಳೆಯಲ್ಲಿ ಒನಕೆ ಅಬ್ಬಿ ಜಲಪಾತದ ನೆತ್ತಿ ತಲುಪಿಬಿಟ್ಟೆವು. ವಿಶೇಷವೆಂದರೆ ಪರ್ವತದ ತುದಿಯಿಂದ ನೀರು ಧುಮ್ಮಿಕ್ಕುವಾಗ ಮೇಲ್ತುದಿಯಲ್ಲಿ ನಿಂತೇ ನೋಡಬೇಕಾದ ಜಾಗವಿದು. ಸದಾ ಹರಿಯುವ ನೀರಿನಿಂದ ಬಂಡೆಗಳು ಪಾಚಿ ಕಟ್ಟಿ ಜಾರುತ್ತಿದ್ದವು. ಹಾಗಾಗಿ ಎಚ್ಚರದಿಂದ ಸುರಕ್ಷಿತವಾದ ಬಂಡೆಯೊಂದರ ಮೇಲೆ ಎಲ್ಲರೂ ಕೂತು ಸೆಲ್ಫಿ ತೆಗೆದುಕೊಂಡೆವು. ಮನಸೂರೆಗೊಳಿಸುವ ಭವ್ಯವಾದ ಜಲಪಾತ ನೋಡಿ ಹಿಂದಿರುಗುವಾಗ, ತಂಡದವರೆಲ್ಲರಿಗೂ ಜಿಗಣೆಯ ಭಯ ಬಹುಪಾಲು ಕಡಿಮೆಯಾಗಿತ್ತು.

ಡ್ಯಾನ್ಸಿಂಗ್ ಫ್ರಾಗ್ಸ್ ಪ್ರಭೇದಕ್ಕೆ ಸೇರಿದ ಕಪ್ಪೆ



ಮಲಬಾರ್ ಟ್ರೋಗನ್


ಸೀತಾ ನದಿಯಲ್ಲಿ ರಾಫ್ಟಿಂಗ್

ರಭಸದಿಂದ ಹರಿಯುವ ನೀರಿನ ಸುತ್ತ ವಾಸ್ತವ್ಯ ಹೂಡುವ ಕಪ್ಪೆಗಳು, ಪ್ರಮುಖವಾಗಿ ಡ್ಯಾನ್ಸಿಂಗ್ ಫ್ರಾಗ್ಸ್ ಪ್ರಭೇದಕ್ಕೆ ಸೇರುತ್ತವೆ. ಒನಕೆ ಅಬ್ಬಿಯಲ್ಲಿ ಇದು ಸಿಗಬಹುದೆಂಬ ಆಸೆಯಲ್ಲಿ ಹುಡುಕಿದೆವು. ಆದರೆ ಕಾಣಿಸಲಿಲ್ಲ. ಹೋಂಸ್ಟೇಗೆ ಬಂದ ಮೇಲೆ ಆ ಜಾತಿಯ ಒಂದು ಕಪ್ಪೆ ಸಿಕ್ಕಿತೆಂದು ಕಾರ್ತಿಕ್ ಅದರ ಫೋಟೋ ತೋರಿಸಿದರು. ಹೇಗೋ ಗುಂಪಿನಲ್ಲಿ ಒಬ್ಬರಿಗಾದರೂ ಸಿಕ್ಕಿತಲ್ಲ ಎಂಬ ಸಮಾಧಾನದೊಂದಿಗೆ ನಿದ್ದೆಗೆ ಜಾರಿದೆವು.

## ಮೂರನೇ ದಿನ..

ಕೊನೆಯ ದಿನ ಬೆಳಿಗ್ಗೆ ರಾಫ್ಟಿಂಗ್ ಮುಗಿಸಿ ಬೆಂಗಳೂರಿನೆಡೆಗೆ ಪಯಣವೆಂದು ನಿರ್ಧಾರವಾಗಿತ್ತು. ಹಾಗೆಯೇ ಕಾಫಿ ಮುಗಿಸಿ ಲಗೇಜ್‌ಗಳನ್ನು ಗಾಡಿಯಲ್ಲಿ ತುಂಬಿ, ಘಟ್ಟವಿಳಿದು ಸಾಗಿದ ಗಾಡಿ, ಹೆಬ್ರಿ ದಾರಿಯಲ್ಲಿ ಸೀತಾ ನದಿಯ ಒಂದು ಸೇತುವೆ ಬಳಿ ನಿಂತಿತು.

ಮೊದಲ ದಿನವೇ ಹೆಸರು ಕೊಟ್ಟಿದ್ದ ಸಾಹಸ ಪ್ರಿಯರು ರಾಫ್ಟಿಂಗ್‌ಗೆಂದು ತೆರಳಿದರು. ನಾವು ಅಲ್ಲಿಂದ ಸೀತಾ ನದಿ ಕ್ಯಾಂಪ್‌ಗೆ ನಡೆದು ಹೋಗಿ ಅವರಿಗಾಗಿ ಕಾದೆವು. ಒಂದು ಘಂಟೆಯ ನಂತರ ನದಿಯ ದಡಕ್ಕೆ ಬಂದಿಳಿದರು. ಹೆಚ್ಚೇನೂ ಸಾಹಸಮಯ ಆಗಿಲ್ಲದಿದ್ದರೂ, ಶಾಂತವಾಗಿ ಸೋಮೇಶ್ವರ ಸ್ಯಾಂಚುರಿ ಒಳ ಬಂದದ್ದು ಬಹಳ ಮುದ ಕೊಟ್ಟಿತೆಂದು ಪಾಲ್ಗೊಂಡವರು ಅನಿಸಿಕೆ ಹಂಚಿಕೊಂಡರು.

ಮಳೆಕಾಡಿನಿಂದ ಕಾಂಕ್ರೀಟ್ ಕಾಡಿನೆಡೆಗೆ ಸಾಗುವಾಗ ಮೂರು ದಿನದ ಹಿಂದೆ ಅಪರಿಚಿತರಾಗಿದ್ದವರನ್ನು ಸ್ನೇಹಿತರನ್ನಾಗಿ ಮಾಡಿ ಸುಂದರ ಸಮಯದ ಸರ ಮಾಲೆಯೊಂದನ್ನು ಕೊಟ್ಟ ಮಿಸ್ಟಿಕ್ ವೈಲ್ಡ್ ಗೆ ವಂದನೆಗಳನ್ನು ಅರ್ಪಿಸಿದೆವು.